2016 ಕ.ತೀ.ವ 746

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಕೆ.ಎಲ್. ಕುಮಾರಸ್ವಾಮಿ –ವಿರುದ್ಧ– ಧನಲಕ್ಷ್ಮೀ ಬ್ಯಾಂಕ್ (ನಿ) ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರ್ ರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ, 2002ರ 13ನೇ ನಿಯಮದ (4)ನೇ ಉಪನಿಯಮ.

ಇದರ ಮೇರೆಗೆ ತೆಗೆದುಕೊಂಡ ಕ್ರಮ – ಅರ್ಜಿದಾರನು ಸ್ವತ್ತನ್ನು ನಿರ್ದಿಷ್ಟ ಪಾಲನೆ ಮೇರೆಗೆ ಡಿಕ್ರಿ ಮಾಡುವಂತೆ ಕ್ಲೇಮು ಮಾಡಿರುತ್ತಾನೆ. ಸ್ವತ್ತನ್ನು ನ್ಯಾಯಾಲಯದ ಹರಾಜು ಮೂಲಕ ಮಾರಾಟ ಮಾಡಲು ಕೋರಿಕೆ– ಇದನ್ನು ಪ್ರಶ್ನಿಸಿ ಇಲ್ಲಿನ ರಿಟ್ ಅರ್ಜಿ ಸಲ್ಲಿಕೆ.

ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 13ನೇ ಪ್ರಕರಣದ (4), (10) ಮತ್ತು (12)ನೇ ಉಪಪ್ರಕರಣಗಳೊಂದಿಗೆ ಓದಿದ 38ನೇ ಪ್ರಕರಣದ (2)ನೇ ಉಪಪ್ರಕರಣದ (1)ನೇ ಉಪಪ್ರಕರಣ ಮತ್ತು (ಬಿ) ಖಂಡವು ಪ್ರದತ್ತಗೊಳಿಸಿದ ಅಧಿಕಾರದ ಅನುಸರಣೆಯಲ್ಲಿ, ಕೇಂದ್ರ ಸರ್ಕಾರವು, ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ನ್ನು ರೂಪಿಸಿರುತ್ತದೆ–13ನೇ ನಿಯಮ ಉಪಬಂಧಿಸಿದ್ದಂತೆ ಸಾಲ ಪಡೆದವನು ಅಥವಾ ಸಾಲ ಪಡೆದವನನ್ನು ಹೊರತುಪಡಿಸಿದ ಯಾರೇ ವ್ಯಕ್ತಿಯ ಮೂಲಕ ಅರ್ಜಿಯನ್ನು ಅಂತೆಯೇ ಅಪೀಲನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಬೇರೆಬೇರೆ ಶುಲ್ಕಗಳನ್ನು ಉಪಬಂಧಿಸಿದೆಯೆಂಬುದು ಸ್ಪಷ್ಟವಾಗಿರುತ್ತದೆ. ''ಸಾಲಗಾರರನ್ನು ಹೊರತುಪಡಿಸಿದ

*ರಿಟ್ ಅರ್ಜಿ ಸಂ: 39316/2015 (ಜಿಎಂ–ಡಿಆರ್‌ಟಿ), ದಿನಾಂಕ: 18ನೇ ಸೆಪ್ಟೆಂಬರ್, 2015.

ವ್ಯಕ್ತಿ''ಗೆ ಸಂಬಂಧಪಡುವಷ್ಟರ ಮಟ್ಟಿಗೆ, 'ಬಾಧಿತ ಪಕ್ಷಕಾರ' ಮತ್ತು 'ಯಾರೇ ವ್ಯಕ್ತಿ' ಪದಾವಳಿಯ ನಡುವೆ ಸ್ಪಷ್ಟತೆಯನ್ನು ತರಬೇಕಾಗುತ್ತದೆ. 13(2)(ಎ) ಮತ್ತು (ಬಿ) ನಿಯಮವು ಸಾಲಗಾರರ ಮೂಲಕ ಸಂದಾಯ ಮಾಡಬಹುದಾದ ನ್ಯಾಯಾಲಯ ಶುಲ್ಕವನ್ನು ಗೊತ್ತುಪಡಿಸುತ್ತದೆ. 13(2)(ಸಿ) ಮತ್ತು (ಡಿ) ನಿಯಮವು ಸಾಲ ಪಡೆದವನನ್ನು ಹೊರತುಪಡಿಸಿ 'ಬಾಧಿತ ವ್ಯಕ್ತಿ' ಯ ಮೂಲಕ ಸಂದಾಯ ಮಾಡಬಹುದಾದ ಶುಲ್ಕವನ್ನು ಗೊತ್ತುಪಡಿಸುತ್ತದೆ. 13(2)(ಇ) ನಿಯಮವು ಸಾಲಗಾರರನ್ನು ಹೊರತುಪಡಿಸಿದ ವ್ಯಕ್ತಿ ಮತ್ತು 'ಬಾಧಿತ ಪಕ್ಷಕಾರ'ನಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಹಾಗಾಗಿ, ನಿಯಮಗಳು (ಎ) ಸಾಲ ಪಡೆದವನು; (ಬಿ) ಬಾಧಿತ ಪಕ್ಷಕಾರ; ಮತ್ತು (ಸಿ) ಯಾರೇ ವ್ಯಕ್ತಿ ಎಂಬ ವ್ಯಕ್ತಿಗಳ ಮೂರು ಪ್ರವರ್ಗಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಆದ್ದರಿಂದ, ನಿಯಮಗಳು ಬೇರೆ ಬೇರೆ ಪ್ರವರ್ಗದ ವ್ಯಕ್ತಿಗಳು, ಎಷ್ಟೆಷ್ಟು ಶುಲ್ಕಗಳನ್ನು ಸಂದಾಯ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸುತ್ತವೆ.

ಈ ಸ್ವತ್ತು, ಅರ್ಜಿದಾರನು, ನಿರ್ದಿಷ್ಟ ಪಾಲನೆಗಾಗಿ ನ್ಯಾಯಾಲಯ ಹರಾಜಿನಲ್ಲಿ ಮಾರಾಟ ಮಾಡಬೇಕೆಂದು ಕೋರಿರುವುದಕ್ಕೆ ಸಂಬಂಧಿಸಿದ ಡಿಕ್ರಿಯಡಿಯಲ್ಲಿ ಕ್ಲೇಮು ಮಾಡಿರುವ ಸ್ವತ್ತೇ ಆಗಿರುತ್ತದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಇವನು ಇದರಿಂದ ಬಾಧಿತನಾಗಿರುತ್ತಾನೆ. ಆದ್ದರಿಂದ ಈತ ಬಾಧಿತ ಪಕ್ಷಕಾರ. ಅಧಿನಿಯಮದ 2(ಎಫ್) ಪ್ರಕರಣದಲ್ಲಿ ಒಳಗೊಂಡ 'ಸಾಲ ಪಡೆದವನು' ಎಂಬ ಪರಿಭಾಷೆಯು 'ಖಾತರಿದಾರ'ನನ್ನು ಒಳಗೊಳ್ಳುತ್ತದೆ. ಆತ ಸಾಲ ಪಡೆದವನಾಗಲಿ ಯಾ ಖಾತರಿದಾರನಾಗಲೀ ಆಗಿರುವುದಿಲ್ಲ. ಆದರೆ ಆತ ತಾನು ಪಕ್ಷಕಾರನಾಗಿರುವಂಥ ವ್ಯವಹರಣೆಗಳಲ್ಲಿ ಆತನ ಸ್ವತ್ತನ್ನು ಮಾರಾಟಕ್ಕೆ ತಂದಿರುವುದರಿಂದ, ಭದ್ರತೆ ಪಡೆದು ಸಾಲ ನೀಡಿದವನು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 13ನೇ ಪ್ರಕರಣದ (4)ನೇ ಉಪಪ್ರಕರಣದಡಿಯಲ್ಲಿನ ಇಂತಹ ಕ್ರಮಗಳಿಂದ ಈತ ಬಾಧಿತನಾಗಿರುತ್ತಾನೆ. ಋಣದ ಮೊಬಲಗು 10 ಲಕ್ಷರೂ.ಗಳಿಗಿಂತ ಕಡಿಮೆ ಇದ್ದಲ್ಲಿ, (ಸಿ) ಖಂಡವು ಅನ್ವಯವಾಗುತ್ತದೆ. ಮೊಬಲಗು 10 ಲಕ್ಷ ರೂ. ಗಳಿಗಿಂತ ಹೆಚ್ಚಾಗಿದ್ದಲ್ಲಿ (ಡಿ) ಖಂಡವು ಅನ್ವಯವಾಗುತ್ತದೆ. ಇದನ್ನೇ ಅಪೀಲು ನ್ಯಾಯಾಧಿಕರಣವು ಅಭಿಪ್ರಾಯ ಪಟ್ಟಿರುತ್ತದೆ. ಸಾಲ ಪಡೆದವನಿಂದ ಅಥವಾ ಸಾಲ ಪಡೆದವನನ್ನು ಹೊರತುಪಡಿಸಿದ ಬಾಧಿತ ವ್ಯಕ್ತಿಯಿಂದ ಮತ್ತು ಮೇಲಿನ ಅರ್ಥವಿವರಣೆಯೊಳಗೆ ಬರದಂಥ ಯಾರೇ ಇತರೆ ವ್ಯಕ್ತಿಗಳಿಂದ ಸಂದಾಯ ಮಾಡಬಹುದಾದ ನ್ಯಾಯಾಲಯ ಶುಲ್ಕಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ

**ನಿಯಮಗಳನ್ನು ಉಪಬಂಧಿಸಿರುವುದರಿಂದ ವಿಧಾನಮಂಡಲದ ಉದ್ದೇಶವು ಸಂದೇಹಗಳಿಲ್ಲದೆ ಸ್ಪಷ್ಟವಾಗಿರುತ್ತದೆ. ಆದುದರಿಂದ ನಿಯಮ 13(2)(1)(ಸಿ) ಮತ್ತು (ಡಿ) ನಿಯಮಗಳ ಅನುಸಾರ ನ್ಯಾಯಾಲಯ ಶುಲ್ಕ ಸಂದಾಯ ಮಾಡಬೇಕೆಂದು ಅರ್ಜಿದಾರನಿಗೆ ನ್ಯಾಯಾಧಿಕರಣವು ನಿರ್ದೇಶಿಸಿರುವುದು ನ್ಯಾಯಸಮ್ಮತ ವಾಗಿದೆಯೆಂದು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ : ಶ್ರೀ ಎನ್.ಪಿ. ಕಲ್ಲೇಶ್ ಗೌಡ, ವಕೀಲರು.

**<u>ಆಜ್ಞೆ</u>**

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

ಅರ್ಜಿದಾರ ಸಾಲ ಪಡೆದವನಾಗಲೀ ಇಲ್ಲವೇ ಸಾಲಕ್ಕೆ ಖಾತರಿ ನೀಡಿರುವವನಾಗಲೀ ಆಗಿರುವುದಿಲ್ಲ. ಆತನ ಅಳಲು ಏನೆಂದರೆ, ಸಂಖ್ಯೆ 17, ವರ್ಧಮಾನಯ್ಯ ಬ್ಲಾಕ್, 50ನೇ ಅಡ್ಡರಸ್ತೆ, ಶಂಕರಪುರಂ, ಬೆಂಗಳೂರು ಇದನ್ನು ಸಾಲ ವಸೂಲಾತಿ ನ್ಯಾಯಾಧಿಕರಣದ ಮೂಲಕ ಮಾರಾಟ ಮಾಡಲು ಕೋರಿಕೆ ಸಲ್ಲಿಸಲಾಗಿರುತ್ತದೆಂಬುದೇ ಆಗಿರುತ್ತದೆ. ನಿಯತ ಅಪೀಲು ಸಂ. 1166/2011 ರಲ್ಲಿ ಈ ನ್ಯಾಯಾಲಯದ ಎದುರು ಪ್ರಶ್ನಿಸಿರುವಂಥ, ಮೂಲ ದಾವೆ. ಸಂ. 1977/1996 ರಲ್ಲಿ ಹೊರಡಿಸಿದ ನಿರ್ದಿಷ್ಟ ಪಾಲನೆಗೆ ಸಂಬಂಧಿಸಿದಂತೆ ಡಿಕ್ರಿಯಡಿಯಲ್ಲಿ ಸದರಿ ಸ್ವತ್ತಿಗೆ ಇವರು ಸ್ವಾಮ್ಯವನ್ನು ಕ್ಲೇಮು ಮಾಡಿರುತ್ತಾರೆ. ಆದಾಗ್ಯೂ, ಇವರ ಹೆಸರಿನಲ್ಲಿ ಯಾವುದೇ ಕ್ರಯಪತ್ರವನ್ನು ಬರೆದುಕೊಡಲಾಗಿರುವುದಿಲ್ಲವಾದ್ದರಿಂದ, ಸ್ವತ್ತನ್ನು ಮಾರಾಟಕ್ಕೆ ತರಲಾಗಿರುತ್ತದೆ. ಈ ಮಧ್ಯೆ, ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002 (ಸಂಕ್ಷಿಪ್ತವಾಗಿ ಇನ್ನುಮುಂದೆ SARFAESI ಅಧಿನಿಯಮ)ರ 17ನೇ ಪ್ರಕರಣದಡಿಯಲ್ಲಿ ಸಾಲ ವಸೂಲಾತಿ ನ್ಯಾಯಾಧಿಕರಣದಿಂದ ಆತನ ಸ್ವತ್ತು ಮಾರಾಟಕ್ಕೆ ಬಂದಿರುತ್ತದೆ.

2. ಕೈಗೊಂಡ ಕ್ರಮಗಳಿಂದ ಬಾಧಿತರಾಗಿರುವ ಅರ್ಜಿದಾರರು, ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002 ರ 13ನೇ ಪ್ರಕರಣದ (4)ನೇ ಉಪ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಸಿದ ತರುವಾಯ, ಸಾಲ ವಸೂಲಾತಿ ಪ್ರಾಧಿಕಾರವು, ಅನುಬಂಧ–ಇ ಪ್ರಕಾರ 21.11.2012 ರಂದು ತನ್ನ ಆದೇಶದಿಂದ ಸದರಿ ಅರ್ಜಿಯನ್ನು ವಜಾಗೊಳಿಸಿರುತ್ತದೆ.

3. ಸದರಿ ಆದೇಶದಿಂದ ಬಾಧಿತನಾದ ಅರ್ಜಿದಾರನು, ಚೆನ್ನೈನ ಸಾಲ ವಸೂಲಾತಿ ಅಪೀಲು ನ್ಯಾಯಾಧಿಕರಣದ ಮುಂದೆ ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 18ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಅಪೀಲಿನ ಜ್ಞಾಪನ ಪತ್ರದ ಮೇಲೆ, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ (ಸಂಕ್ಷಿಪ್ತತೆಗಾಗಿ ನಿಯಮಗಳು ಎಂದು ಕರೆಯಲಾಗಿರುತ್ತದೆ) 13 (2) (1) (ಇ) ಪ್ರಕರಣದಡಿಯಲ್ಲಿ ನ್ಯಾಯಾಲಯದ ಫೀಜನ್ನು ಲೆಕ್ಕ ಹಾಕಿ 350 ರೂ.ಗಳ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಿರುತ್ತಾನೆ. ಕಚೇರಿಯು ಈ ಬಗ್ಗೆ ಆಕ್ಷೇಪವನ್ನೆತ್ತಿ ನ್ಯಾಯಾಲಯ ಫೀಜನ್ನು ಸಂದಾಯ ಮಾಡಲು ವಾಸ್ತವವಾಗಿ 13 (2) (1) (ಸಿ) ಮತ್ತು (ಡಿ) ಪ್ರಕರಣವು ಸರಿಯಾದ ಅನ್ವಯವಾಗಿದ್ದು, ಅಪೀಲಿನ ಜ್ಞಾಪನದ ಮೇಲೆ ಈತ 53,250/– ರೂ.ಗಳ ಮೊಬಲಗನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು. ಈತ ಕೇವಲ 350/– ರೂ.ಗಳನ್ನು ಸಂದಾಯ ಮಾಡಿರುವುದರಿಂದ ಉಳಿದ ನ್ಯಾಯಾಲಯ ಫೀಜು 52,900/– ರೂ.ಗಳನ್ನು ಸಂದಾಯ ಮಾಡಬೇಕಾಗಿರುತ್ತದೆಂದು ತಿಳಿಸಿದೆ. ಅರ್ಜಿದಾರನು, ಅಪೀಲು ನ್ಯಾಯಾಧಿಕರಣದ ಮುಂದೆ, ಸದರಿ ಲೆಕ್ಕಾಚಾರವು ಸರಿಯಾದುದಾಗಿರುವುದಿಲ್ಲ ಹಾಗೂ ಅನ್ವಯಿಸಬಹುದಾದಂಥ ಸರಿಯಾದ ಉಪಬಂಧವು 13(2)(1)(ಇ) ಪ್ರಕರಣವಾಗಿದ್ದು, 13(2)(1)(ಡಿ) ಅಲ್ಲವೆಂದು ವಾದಿಸಿರುತ್ತಾನೆ. ನ್ಯಾಯಾಧಿಕರಣದ ವಿವಿಧ ತೀರ್ಪುಗಳ ಟಿಪ್ಪಣಿಯನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ನ್ಯಾಯಾಧಿಕರಣವು, ಅರ್ಜಿದಾರನು "ಬಾಧಿತ ವ್ಯಕ್ತಿ" ಯಾಗಿರುತ್ತಾನೆಂಬ ತೀರ್ಮಾನಕ್ಕೆ ಬಂದಿರುತ್ತದೆ. ಆದ್ದರಿಂದ ನಿಯಮ 13(2)(1)(ಇ) ಯನ್ನು ಅನ್ವಯಿಸಲಾಗುವುದಿಲ್ಲ. ಆದ್ದರಿಂದ ಅನ್ವಯಿಸಬೇಕಾದುದು 13(2)(1)(ಸಿ)

ಮತ್ತು (ಡಿ) ಪ್ರಕರಣವಾಗಿರುತ್ತವೆ. ಆದ್ದರಿಂದ ಇದು ಅಪೀಲನ್ನು ವಜಾಗೊಳಿಸಿರುತ್ತದೆ.

4. ಸದರಿ ಆದೇಶದಿಂದ ಬಾಧಿತನಾದವನು, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ.

5. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಕಲ್ಲೇಶ್ ಗೌಡರವರು ಪ್ರಶ್ನಿತ ಆದೇಶವನ್ನು ಟೀಕಿಸುವುದರೊಂದಿಗೆ, ಅರ್ಜಿದಾರನು ಸಾಲ ಪಡೆದವನಾಗಲೀ ಇಲ್ಲವೇ ಖಾತರಿ ನೀಡಿರುವ ವ್ಯಕ್ತಿಯಾಗಲೀ ಆಗಿಲ್ಲದಿರುವುದರಿಂದ, ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 17ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವಾಗ ಮತ್ತು ಸದರಿ ಅರ್ಜಿಯ ಮೇಲೆ ನ್ಯಾಯಾಲಯದ ಫೀಜಿನಂತೆ 200/– ರೂ.ಗಳ ಮೊಬಲಗನ್ನು ಸಂದಾಯ ಮಾಡಿರುವಾಗ, ಅಪೀಲಿನಲ್ಲಿ 13(2)(1)(ಇ) ನಿಯಮದಡಿಯಲ್ಲಿ ನ್ಯಾಯಾಲಯ ಶುಲ್ಕವೆಂದು ಕೇವಲ 200 ರೂ.ಗಳನ್ನು ಮಾತ್ರ ಸಂದಾಯ ಮಾಡಬೇಕಾಗಿರುತ್ತದೆಯೇ ಹೊರತು 13(2)(1)(ಸಿ) ಮತ್ತು (ಡಿ) ಪ್ರಕರಣಗಳಡಿಯಲ್ಲಿ ಆಗಿರುವುದಿಲ್ಲ. ಆದ್ದರಿಂದ, ಅವರು ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು ಅಗತ್ಯಪಡಿಸಿರುತ್ತಾರೆ.

6. ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 17ನೇ ಪ್ರಕರಣವು ಅಪೀಲು ಸಲ್ಲಿಸುವ ಹಕ್ಕಿಗೆ ಸಂಬಂಧಿಸಿದಂತೆ ಉಪಬಂಧವನ್ನು ಕಲ್ಪಿಸಿರುತ್ತದೆ.

> ***17. ಅಪೀಲು ಸಲ್ಲಿಸುವ ಹಕ್ಕು.*** *– (1) ಈ ಅಧ್ಯಾಯದಡಿಯಲ್ಲಿ ಭದ್ರತೆ ಪಡೆದ ಸಾಲಗಾರ ಅಥವಾ ಆತನ ಅಧಿಕೃತ ಅಧಿಕಾರಿಯು ಕೈಗೊಂಡ 13ನೇ ಪ್ರಕರಣದ (4)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಮಾನದಂಡಗಳಿಂದ ಬಾಧಿತನಾದ ಯಾರೇ ವ್ಯಕ್ತಿ (ಸಾಲಗಾರನನ್ನು ಒಳಗೊಂಡಂತೆ) ಅಂಥ ಮಾನದಂಡವನ್ನು ಕೈಗೊಂಡಂಥ ದಿನಾಂಕದಿಂದ ನಲವತ್ತೈದು*

*ದಿನಗಳೊಳಗೆ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದ, ಹೊಂದಿರುವ ಸಾಲ ವಸೂಲಾತಿ ನ್ಯಾಯಾಧಿಕರಣಕ್ಕೆ ಗೊತ್ತುಪಡಿಸಬಹುದಾದಂತೆ ಅಂಥ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.*

*ಪರಂತು, ಬೇರೆ ಶುಲ್ಕಗಳನ್ನು ಸಾಲಗಾರನಿಂದ ಮತ್ತು ಸಾಲಗಾರನನ್ನು ಹೊರತುಪಡಿಸಿದ ವ್ಯಕ್ತಿಯಿಂದ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಬಹುದು.*

7. ಮೇಲೆ ಹೇಳಿದ ಉಪಬಂಧದಿಂದ ಕಂಡುಬಂದಂತೆ ಭದ್ರತೆ ಪಡೆದ ಸಾಲಿಗನು ಕೈಗೊಂಡ, ಅಧಿನಿಯಮದ 13ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಮಾನದಂಡಗಳಿಂದ ಬಾಧಿತನಾದ ಸಾಲ ಪಡೆದವನೂ ಒಳಗೊಂಡಂತೆ ಯಾರೇ ವ್ಯಕ್ತಿಗೂ ಅಪೀಲು ಸಲ್ಲಿಸುವ ಶಾಸನಾತ್ಮಕ ಹಕ್ಕು ಪ್ರದತ್ತವಾಗಿರುತ್ತದೆ. ಪರಂತುಕವು, ಸಾಲ ಪಡೆದವನು ಮತ್ತು ಸಾಲ ಪಡೆದವನನ್ನು ಹೊರತುಪಡಿಸಿದ ಇತರೆ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಬೇರೆಬೇರೆ ಶುಲ್ಕಗಳನ್ನು ನಿರ್ದಿಷ್ಟಪಡಿಸಬಹುದಾಗಿರುತ್ತದೆಂಬುದನ್ನು ಸ್ಪಷ್ಟಪಡಿಸುತ್ತದೆ. 18ನೇ ಪ್ರಕರಣವು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಅದು ಈ ಮುಂದಿನಂತಿರುತ್ತದೆ:

***18. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಕೆ.–***

*(1) 17ನೇ ಪ್ರಕರಣದಡಿಯಲ್ಲಿ ಸಾಲ ವಸೂಲಾತಿ ನ್ಯಾಯಾಧಿಕರಣವು ರೂಪಿಸಿದ ಯಾವುದೇ ಆದೇಶದಿಂದ, ಬಾಧಿತನಾದ ಯಾರೇ ವ್ಯಕ್ತಿಯು, ಸಾಲ ವಸೂಲಾತಿ ನ್ಯಾಯಾಧಿಕರಣದ ಆದೇಶಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಪೀಲು ನ್ಯಾಯಾಧಿಕರಣಕ್ಕೆ ಗೊತ್ತುಪಡಿಸಬಹುದಾದಂಥ ಶುಲ್ಕದೊಂದಿಗೆ ಅಪೀಲನ್ನು ಸಲ್ಲಿಸಬಹುದು.*

*ಪರಂತು, ಆ ವಿಭಿನ್ನ ಶುಲ್ಕಗಳನ್ನು, ಸಾಲಗಾರ ಅಥವಾ ಸಾಲಗಾರನನ್ನು ಹೊರತುಪಡಿಸಿದ ಇತರೆ ವ್ಯಕ್ತಿಯಿಂದ ಅಪೀಲನ್ನು ಸಲ್ಲಿಸುವುದಕ್ಕೆ ಸಂಬಂಧಸಿದಂತೆ ನಿಗದಿಪಡಿಸಬಹುದು.*

8. 17ನೇ ಪ್ರಕರಣದಲ್ಲಿದ್ದಂತೆ, 18ನೇ ಪ್ರಕರಣದ ಪರಂತುಕವೂ ಸಹ, ಸಾಲ ಪಡೆದವನು ಅಥವಾ ಸಾಲ ಪಡೆದವನನ್ನು ಹೊರತುಪಡಿಸಿದ ಇತರೆ ವ್ಯಕ್ತಿಯಿಂದ ಅಪೀಲು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಬೇರೆಬೇರೆ ಶುಲ್ಕಗಳನ್ನು ಗೊತ್ತುಪಡಿಸಬಹುದೆಂಬುದನ್ನು ಉಪಬಂಧಿಸಿರುತ್ತದೆ.

9. ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 13ನೇ ಪ್ರಕರಣದ (4), (10) ಮತ್ತು (12)ನೇ ಉಪಪ್ರಕರಣಗಳೊಂದಿಗೆ ಓದಿದ 38ನೇ ಪ್ರಕರಣದ (2)ನೇ ಉಪಪ್ರಕರಣದ (1)ನೇ ಉಪಪ್ರಕರಣ ಮತ್ತು (ಬಿ) ಖಂಡವು ಪ್ರದತ್ತಗೊಳಿಸಿದ ಅಧಿಕಾರದ ಅನುಸರಣೆಯಲ್ಲಿ, ಕೇಂದ್ರ ಸರ್ಕಾರವು, ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ನ್ನು ರೂಪಿಸಿರುತ್ತದೆ. 13ನೇ ನಿಯಮವನ್ನು ಈ ಮುಂದಿನಂತೆ ಓದಲಾಗಿದೆ:

> ***13. ಅಧಿನಿಯಮದ 17 ಮತ್ತು 18ನೇ ಪ್ರಕರಣಗಳಡಿಯಲ್ಲಿನ ಅರ್ಜಿಗಳು ಮತ್ತು ಅಪೀಲುಗಳಿಗೆ ಸಂಬಂಧಿಸಿದಂಥ ಫೀಜುಗಳು.–*** *(1) 17ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿನ ಪ್ರತಿಯೊಂದು ಅರ್ಜಿಯು ಅಥವಾ 18ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿನ ಅಪೀಲು ಪ್ರಾಧಿಕಾರದ ಅಪೀಲು (2)ನೇ ಉಪನಿಯಮದಲ್ಲಿ ಉಪಬಂಧಿಸಿದ ಶುಲ್ಕಕ್ಕೆ ಪೂರಕವಾಗಿರತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಬಹುದಾದ ಸ್ಥಳದಲ್ಲಿರುವಂಥ ನ್ಯಾಯಾಧಿಕರಣ ಅಥವಾ ನ್ಯಾಯಾಲಯದಲ್ಲಿ ಸಂದರ್ಭಾನುಸಾರ ನ್ಯಾಯಾಧಿಕರಣ ಅಥವಾ ನ್ಯಾಯಾಲಯದ ರಿಜಿಸ್ಟ್ರಾರನ ಹೆಸರಿನಲ್ಲಿ ಬ್ಯಾಂಕುಗಳಲ್ಲಿ ಪಡೆದ ಕ್ರಾಸು ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಇರಸಾಲು ಮಾಡಬಹುದು.*

*(2) ಶುಲ್ಕದ ಮೊಬಲಗನ್ನು ಈ ಮುಂದಿನಂತೆ ಸಂದಾಯ ಮಾಡಬಹುದು:*

| ಸಂ. | ಅರ್ಜಿಯ ಸ್ವರೂಪ | ಸಂದಾಯ ಮಾಡಬಹುದಾದ ಶುಲ್ಕದ ಮೊಬಲಗು |
|---|---|---|
| 1 | 13ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕ್ರಮಗಳಿಗೆ ಪ್ರತಿಯಾಗಿ 17ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿ ಸಾಲ ವಸೂಲಾತಿ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸುವುದು | |
| (ಎ) | ಸಾಲ ಪಡೆದವನು ಅರ್ಜಿದಾರನಾಗಿದ್ದು, ಸಾಲದ ಬಾಕಿ ಮೊಬಲಗು 10 ಲಕ್ಷಗಳಿಗಿಂತ ಕಡಿಮೆ ಇರುವಲ್ಲಿ | ಪ್ರತಿ ಒಂದು ಲಕ್ಷ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ 500 ರೂ.ಗಳು. |
| (ಬಿ) | ಸಾಲ ಪಡೆದವನು ಅರ್ಜಿದಾರನಾಗಿದ್ದು, ಸಾಲದ ಬಾಕಿಯು 10 ಲಕ್ಷ ಮತ್ತು ಅದಕ್ಕಿಂತ ಹೆಚ್ಚಾಗಿದ್ದಲ್ಲಿ | ಗರಿಷ್ಠ 1,00,000ಕ್ಕೆ ಒಳಪಟ್ಟು 10 ಲಕ್ಷ ರೂ.ಗಳನ್ನು ಮೀರಿದಲ್ಲಿ ಪ್ರತೀ 1 ಲಕ್ಷ ಅಥವಾ ಅದರ ಭಾಗಕ್ಕೆ 5000 ರೂ.ಗಳು + 250 ರೂ.ಗಳು |
| (ಸಿ) | ಅರ್ಜಿದಾರನು, ಸಾಲಪಡೆದವನನ್ನು ಹೊರತುಪಡಿಸಿದ ಬಾಧಿತ ವ್ಯಕ್ತಿಯಾಗಿದ್ದು, ಋಣದ ಬಾಕಿ ಮೊಬಲಗು 10 ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದಲ್ಲಿ, | ಪ್ರತಿ 1 ಲಕ್ಷ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ 125/– ರೂ. |

| ಸಂ. | ಅರ್ಜಿಯ ಸ್ವರೂಪ | ಸಂದಾಯ ಮಾಡಬಹುದಾದ ಶುಲ್ಕದ ಮೊಬಲಗು |
|---|---|---|
| (ಡಿ) | ಅರ್ಜಿದಾರನು ಸಾಲ ಪಡೆದವನನ್ನು ಹೊರತುಪಡಿಸಿದ ಬಾಧಿತ ವ್ಯಕ್ತಿಯಾಗಿದ್ದು, ಋಣದ ಬಾಕಿಯು 10 ಲಕ್ಷಗಳು ಮತ್ತು ಅದಕ್ಕಿಂತ ಹೆಚ್ಚಾಗಿದ್ದಲ್ಲಿ | ಗರಿಷ್ಠ 50,000/–ಕ್ಕೆ ಒಳಪಟ್ಟು, 10 ಲಕ್ಷ ರೂ.ಗಳನ್ನು ಮೀರಿದಲ್ಲಿ ಪ್ರತೀ 1 ಲಕ್ಷ ಅಥವಾ ಅದರ ಭಾಗಕ್ಕೆ 1250 ರೂ.+ 125 ರೂ.ಗಳು |
| (ಇ) | ಯಾರೇ ವ್ಯಕ್ತಿಯಿಂದ ಯಾವುದೇ ಇತರ ಅರ್ಜಿ | 200/– ರೂ. |
| 2. | 17ನೇ ಪ್ರಕರಣದಡಿಯಲ್ಲಿ ಸಾಲ ವಸೂಲಾತಿ ಪ್ರಾಧಿಕಾರದಿಂದ ಹೊರಡಿಸಿದ ಯಾವುದೇ ಆದೇಶದ ವಿರುದ್ಧ ಅಪೀಲು ಪ್ರಾಧಿಕಾರಕ್ಕೆ ಅಪೀಲು | ಈ ನಿಯಮದ 1ನೇ ಕ್ರಮ ಸಂಖ್ಯೆಯ (ಎ) ಯಿಂದ (ಇ) ವರೆಗಿನ ಖಂಡಗಳಲ್ಲಿ ಉಪಬಂಧಿಸಿದಂಥದ್ದೇ ಶುಲ್ಕಗಳು. |

10. ಆದ್ದರಿಂದ, ಸದರಿ ನಿಯಮಗಳು, ಸಾಲ ಪಡೆದವನು ಅಥವಾ ಸಾಲ ಪಡೆದವನನ್ನು ಹೊರತುಪಡಿಸಿದ ಯಾರೇ ವ್ಯಕ್ತಿಯ ಮೂಲಕ ಅರ್ಜಿಯನ್ನು ಅಂತೆಯೇ ಅಪೀಲನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಬೇರೆಬೇರೆ ಶುಲ್ಕಗಳನ್ನು ಉಪಬಂಧಿಸಿದೆಯೆಂಬುದು ಸ್ಪಷ್ಟವಾಗಿರುತ್ತದೆ. "ಸಾಲಗಾರರನ್ನು ಹೊರತುಪಡಿಸಿದ ವ್ಯಕ್ತಿ"ಗೆ ಸಂಬಂಧಪಡುವಷ್ಟರ ಮಟ್ಟಿಗೆ, 'ಬಾಧಿತ ಪಕ್ಷಕಾರ' ಮತ್ತು 'ಯಾರೇ ವ್ಯಕ್ತಿ' ಪದಾವಳಿಯ ನಡುವೆ ಸ್ಪಷ್ಟತೆಯನ್ನು ತರಬೇಕಾಗುತ್ತದೆ. 13(2)(ಎ) ಮತ್ತು (ಬಿ) ನಿಯಮವು ಸಾಲಗಾರರ ಮೂಲಕ ಸಂದಾಯ ಮಾಡಬಹುದಾದ ನ್ಯಾಯಾಲಯ ಶುಲ್ಕವನ್ನು ಗೊತ್ತುಪಡಿಸುತ್ತದೆ. 13(2)(ಸಿ) ಮತ್ತು (ಡಿ) ನಿಯಮವು ಸಾಲ ಪಡೆದವನನ್ನು ಹೊರತುಪಡಿಸಿ 'ಬಾಧಿತ ವ್ಯಕ್ತಿ' ಯ ಮೂಲಕ ಸಂದಾಯ ಮಾಡಬಹುದಾದ ಶುಲ್ಕವನ್ನು ಗೊತ್ತುಪಡಿಸುತ್ತದೆ. 13(2)(ಇ) ನಿಯಮವು ಸಾಲಗಾರರನ್ನು ಹೊರತುಪಡಿಸಿದ ವ್ಯಕ್ತಿ ಮತ್ತು 'ಬಾಧಿತ ಪಕ್ಷಕಾರ'ನಿಗೆ

ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಹಾಗಾಗಿ, ನಿಯಮಗಳು (ಎ) ಸಾಲ ಪಡೆದವನು; (ಬಿ) ಬಾಧಿತ ಪಕ್ಷಕಾರ; ಮತ್ತು (ಸಿ) ಯಾರೇ ವ್ಯಕ್ತಿ ಎಂಬ ವ್ಯಕ್ತಿಗಳ ಮೂರು ಪ್ರವರ್ಗಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ. ಆದ್ದರಿಂದ, ನಿಯಮಗಳು ಬೇರೆ ಬೇರೆ ಪ್ರವರ್ಗದ ವ್ಯಕ್ತಿಗಳು, ಎಷ್ಟೆಷ್ಟು ಶುಲ್ಕಗಳನ್ನು ಸಂದಾಯ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸುತ್ತವೆ.

11. ಈ ಸ್ವತ್ತು, ಅರ್ಜಿದಾರನು, ನಿರ್ದಿಷ್ಟ ಪಾಲನೆಗಾಗಿ ನ್ಯಾಯಾಲಯ ಹರಾಜಿನಲ್ಲಿ ಮಾರಾಟ ಮಾಡಬೇಕೆಂದು ಕೋರಿರುವುದಕ್ಕೆ ಸಂಬಂಧಿಸಿದ ಡಿಕ್ರಿಯಡಿಯಲ್ಲಿ ಕ್ಲೇಮು ಮಾಡಿರುವ ಸ್ವತ್ತೇ ಆಗಿರುತ್ತದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಇವನು ಇದರಿಂದ ಬಾಧಿತನಾಗಿರುತ್ತಾನೆ. ಆದ್ದರಿಂದ ಈತ ಬಾಧಿತ ಪಕ್ಷಕಾರ. ಅಧಿನಿಯಮದ 2(ಎಫ್) ಪ್ರಕರಣದಲ್ಲಿ ಒಳಗೊಂಡ 'ಸಾಲ ಪಡೆದವನು' ಎಂಬ ಪರಿಭಾಷೆಯು 'ಖಾತರಿದಾರ'ನನ್ನು ಒಳಗೊಳ್ಳುತ್ತದೆ. ಆತ ಸಾಲ ಪಡೆದವನಾಗಲಿ ಯಾ ಖಾತರಿದಾರನಾಗಲೀ ಆಗಿರುವುದಿಲ್ಲ. ಆದರೆ ಆತ ತಾನು ಪಕ್ಷಕಾರನಾಗಿರುವಂಥ ವ್ಯವಹರಣೆಗಳಲ್ಲಿ ಆತನ ಸ್ವತ್ತನ್ನು ಮಾರಾಟಕ್ಕೆ ತಂದಿರುವುದರಿಂದ, ಭದ್ರತೆ ಪಡೆದು ಸಾಲ ನೀಡಿದವನು ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರಚನೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ, 2002ರ 13ನೇ ಪ್ರಕರಣದ (4)ನೇ ಉಪಪ್ರಕರಣದಡಿಯಲ್ಲಿನ ಇಂತಹ ಕ್ರಮಗಳಿಂದ ಈತ ಬಾಧಿತನಾಗಿರುತ್ತಾನೆ. ಋಣದ ಮೊಬಲಗು 10 ಲಕ್ಷರೂ.ಗಳಿಗಿಂತ ಕಡಿಮೆ ಇದ್ದಲ್ಲಿ, (ಸಿ) ಖಂಡವು ಅನ್ವಯವಾಗುತ್ತದೆ. ಮೊಬಲಗು 10 ಲಕ್ಷ ರೂ. ಗಳಿಗಿಂತ ಹೆಚ್ಚಾಗಿದ್ದಲ್ಲಿ (ಡಿ) ಖಂಡವು ಅನ್ವಯವಾಗುತ್ತದೆ. ಇದನ್ನೇ ಅಪೀಲು ನ್ಯಾಯಾಧಿಕರಣವು ಅಭಿಪ್ರಾಯ ಪಟ್ಟಿರುತ್ತದೆ. ಸಾಲ ಪಡೆದವನಿಂದ ಅಥವಾ ಸಾಲ ಪಡೆದವನನ್ನು ಹೊರತುಪಡಿಸಿದ ಬಾಧಿತ ವ್ಯಕ್ತಿಯಿಂದ ಮತ್ತು ಮೇಲಿನ ಅರ್ಥವಿವರಣೆಯೊಳಗೆ ಬರದಂಥ ಯಾರೇ ಇತರೆ ವ್ಯಕ್ತಿಗಳಿಂದ ಸಂದಾಯ ಮಾಡಬಹುದಾದ ನ್ಯಾಯಾಲಯ ಶುಲ್ಕಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ನಿಯಮಗಳನ್ನು ಉಪಬಂಧಿಸಿರುವುದರಿಂದ ವಿಧಾನಮಂಡಲದ ಉದ್ದೇಶವು ಸಂದೇಹಗಳಿಲ್ಲದೆ ಸ್ಪಷ್ಟವಾಗಿರುತ್ತದೆ. ಆದ್ದರಿಂದ, ಅರ್ಜಿದಾರನು ಸಾಲ ಪಡೆದವನಾಗಲೀ ಇಲ್ಲವೇ ಖಾತರಿದಾರನಾಗಲೀ ಆಗಿರದೆ ಇರುವುದರಿಂದ, ಈತನನ್ನು ಯಾರೇ ವ್ಯಕ್ತಿಯೆಂದು ಅರ್ಥೈಸಬೇಕಾಗಿದ್ದು, 'ಬಾಧಿತ

ಪಕ್ಷಕಾರ' ನೆಂದಲ್ಲ. ಹಾಗಾಗಿ, (ಸಿ) ಖಂಡದ ಸೌಲಭ್ಯವು ಇಲ್ಲಿ ಉದ್ಭವಿಸುವುದಿಲ್ಲ ಎಂಬುದು ಇಲ್ಲಿನ ವಾದವಾಗಿರುತ್ತದೆ. ವಿಷಯದ ಹಿನ್ನೆಲೆ ಹೀಗಿರುವಾಗ, ನಮಗೆ ಈ ಅರ್ಜಿಯಲ್ಲಿ ಯಾವುದೇ ಹುರುಳು ಕಂಡುಬಂದಿರುವುದಿಲ್ಲ. ತದನುಸಾರವಾಗಿ ಅರ್ಜಿಯನ್ನು ವಜಾಗೊಳಿಸಲಾಗಿದೆ.

12. ಆದಾಗ್ಯೂ, ನ್ಯಾಯಾಧಿಕರಣವು, ಕೊರತೆಯಿರುವ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಲು ತನ್ನ ಆದೇಶದ ದಿನಾಂಕದಿಂದ ನಾಲ್ಕು ವಾರಗಳಷ್ಟು ಕಾಲಾವಕಾಶವನ್ನು ನೀಡಿದ್ದು, ಇದಕ್ಕೆ ತಪ್ಪಿದಲ್ಲಿ, ಅಪೀಲು ತಿರಸ್ಕೃತವಾಗತಕ್ಕದ್ದೆಂಬುದನ್ನು ಸ್ಪಷ್ಟಪಡಿಸಿರುತ್ತದೆ. ಸದರಿ ಆದೇಶವನ್ನು ನಮ್ಮ ಮುಂದೆ ಪ್ರಶ್ನಿಸಿರುವುದರಿಂದ ಮತ್ತು ನಾವೂ ಸಹ ಅರ್ಜಿಯನ್ನು ವಜಾ ಮಾಡಿರುವುದರಿಂದ, ನ್ಯಾಯೋದ್ದೇಶವು, ಅರ್ಜಿದಾರನಿಗೆ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಲು ಮತ್ತು ಅಪೀಲನ್ನು ಮುಂದುವರೆಸಲು ಅವಕಾಶವನ್ನು ನೀಡಬೇಕೆಂದು ಒತ್ತಾಯಿಸುತ್ತದೆ. ಹಾಗಾಗಿ, 52,900/– ರೂ.ಗಳ ಕೊರತೆಯಿರುವ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಲು ಅಪೀಲುದಾರನಿಗೆ ಇಂದಿನಿಂದ ನಾಲ್ಕು ವಾರಗಳ ಕಾಲಾವಕಾಶವನ್ನು ನೀಡುತ್ತೇವೆ. ಇಂದಿನಿಂದ ನಾಲ್ಕು ವಾರಗಳೊಳಗೆ ಸದರಿ ಮೊಬಲಗನ್ನು ಸಂದಾಯ ಮಾಡಿದಲ್ಲಿ ಅಪೀಲು ಪ್ರಾಧಿಕಾರವು ಗುಣಾರ್ಹತೆಗಳ ಆಧಾರದ ಮೇಲೆ ಅಪೀಲನ್ನು ಸುನಾವಣೆ ಮಾಡತಕ್ಕದ್ದು. ಯಾವುದೇ ವೆಚ್ಚಗಳಿರುವುದಿಲ್ಲ.